**<u>ಸಾಕ್ಷಿಯನ್ನು ದಿಃ 21.03.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ವಿ ವಿ ವಕೀಲರಿಂದ.</u>**

ನಿಡಿ-14 ರಲ್ಲಿ ಗ್ರಾಮದ ಹೆಸರನ್ನು ಬರೆದಿಲ್ಲ ಎಂದರೆ ಸರಿ. ನಿಡಿ-3 ರಲ್ಲಿರುವ 15 ಗಜ x 25 ಗಜ ಎಂದರೆ 45x75 ಅಡಿ ಎಂದರೆ ಸರಿ. ನಿಡಿ-14 ರಲ್ಲಿ 36x41 ಅಡಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಡಿ-3 ರಲ್ಲಿ ಇರುವ ವಿಸ್ತೀರ್ಣ ಕ್ಕಿಂತ ಕಡಿಮೆ ವಿಸ್ತೀರ್ಣವನ್ನ ನಿಡಿ-14 ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ಆ ಆಸ್ತಿಯಲ್ಲಿ 45x35 ಅಡಿ ಖಾಲಿ ಜಾಗ ಇದೆ ಎಂದು ನುಡಿಯುತ್ತಾರೆ. ಸದರಿ ಉಳಿದಿರುವ ಅಸ್ತಿಗೆ ಯಾವುದೇ ಖಾತೆಯನ್ನು ನಾನು ಮಾಡಿಸಿಕೊಂಡಿರುವುದಿಲ್ಲ. ನಿಡಿ-8 ರಂತೆ ನಮಗೆ ಮನೆ ಕಟ್ಟಲು ಲೈಸೆನ್ಸ್ ನೀಡಿರುವ ದಾಖಲೆಯಲ್ಲಿ ದಕ್ಷಿಣಕ್ಕೆ - ಉಳಿಕೆ ರಾಮಚಂದ್ರಯ್ಯನವರ ಅಸ್ತಿ ಎಂದು ನಮೂದು ಇದೆ ಎಂದರೆ ಸರಿ. ನಿಡಿ-14 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿ ದಕ್ಷಿಣಕ್ಕೆ - ದೊಡ್ಡತಮ್ಮಯ್ಯನವರ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿ. ದೊಡ್ಡತಮ್ಮಯ್ಯ ವಾದಿ ಜಯಮ್ಮನವರ ಗಂಡನ ಅಣ್ಣ ಎಂದರೆ ಸರಿ. ನಿಡಿ-14 ರಲ್ಲಿ ಸದರಿ ಅಸ್ತಿಯ ದಕ್ಷಿಣಕ್ಕೆ ನಾನು ಉಳಿಸಿಕೊಂಡಿರುವ ಜಮೀನು ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಡಿ-8 ರಿಂದ 10 ಮತ್ತು ನಿಡಿ-14 ದಾವಾ ಅಸ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಬಂಡೀಗೌಡನಪಾಳ್ಯ ಗ್ರಾಮದಲ್ಲಿ ನಾವು ವಾಸವಾಗಿರುವ ಬೇರೆ ಮನೆಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ-16 ದಾಖಲೆಯು ಯಾವ ಗ್ರಾಮಕ್ಕೆ ಸಂಬಂಧಿಸಿದ್ದು ಎಂದು ನಮೂದಿಸಿಲ್ಲ ಎಂದರೆ ಸರಿ. ಅದು ಅಪೂರ್ಣ ದಾಖಲೆಯಾಗಿರುತ್ತದೆ. ನಿಡಿ-17 ರಿಂದ 23 ದಾಖಲೆಗಳಲ್ಲಿ ನಮೂದು ಆಗಿರುವ 106/107 ಅಸ್ತಿಯು ನಾನು ಹಾಜರು ಮಾಡಿರುವ ಯಾವುದೇ ಇತರೆ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಡಿ-17 ರಿಂದ 23 ದಾಖಲೆಗಳಲ್ಲಿ ಬಂಡೀಗೌಡನಪಾಳ್ಯ ಗ್ರಾಮದ ಹೆಸರು ನಮೂದು ಆಗಿದೆ ಕೆಂಚನಹಳ್ಳಿ ಗ್ರಾಮ ಎಂದು ನಮೂದು ಇಲ್ಲ ಎಂದರೆ ಸರಿ. 2007 ರಲ್ಲಿ ನಾನೇ ಅರ್ಜಿ ಕೊಟ್ಟು ನಿಡಿ-24 ರಂತೆ ಅಳತೆ ಮಾಡಿಸಿರುತ್ತೇನೆ. ಅಷ್ಟರಲ್ಲಿ ಆಗಲೇ ಈ ದಾವೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ನಿಡಿ-14 ರಲ್ಲಿ ಯಾವ ಅರ್ಜಿದಾರರು ಯಾವ ಉದ್ದೇಶಕ್ಕೆ ಸರ್ವೆ ಅರ್ಜಿ ಕೊಟ್ಟಿರುತ್ತಾರೆ ಎಂದು ನಮೂದು ಇಲ್ಲ ಎಂದರೆ ಸರಿ. ನಾನು ನನ್ನ ಹೆಸರಿನಲ್ಲಿ ಇರುವ ಅಸ್ತಿಯನ್ನು ಮಾತ್ರ ಅರ್ಜಿ ಕೊಟ್ಟು ಸರ್ವೆ ಮಾಡಿಸಿಕೊಳ್ಳಬಹುದು ಎಂದರೆ ಸರಿ. ನಾನು ಸರ್ವೆಗೆ ಅರ್ಜಿ

ಕೊಟ್ಟಿರುತ್ತೇನೆಂದು ಹೇಳುವ ಕಾಲಕ್ಕೆ ಸ.ನಂ. 10/6 ರಲ್ಲಿ ನಮ್ಮ ಹೆಸರಿಗೆ ಪಹಣಿ ದಾಖಲೆಗಳು ಇರಲ್ಲಿ ಎಂದರೆ ಸರಿ. ನಿಡಿ-24 ರಲ್ಲಿ ನಮೂದಿಸಿರುವಂತೆ ಸರ್ವೆ ನಂಬರ್ 10/6 3 ಗುಂಟೆ ವಿಸ್ತೀರ್ಣ ಎಂದು ನಿಡಿ-3 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ-3 ದಾಖಲೆಯಲ್ಲಿ ಕಾನೇಶು ಮಾರಿ ನಂಬರ್ 86 ಪೂರ್ವ – ಪಶ್ಚಿಮ -15 ಗಜ , ಉತ್ತರ – ದಕ್ಷಿಣ – 45 ಗಜ ಎಂದು ನಮೂದು ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಚೆಕ್ಕುಬಂದಿ ಹೊಂದಾಣಿಕೆಯಾಗುತ್ತಿದೆ ಎಂದು ನುಡಿಯುತ್ತಾರೆ. ನಿಡಿ-3 ದಾಖಲೆಯಲ್ಲಿ 3 ಗುಂಟೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಸರ್ವೆಯರು ನಮ್ಮ ಜೊತೆ ಶರೀಕಾಗಿ ನಿಡಿ-24 ರಲ್ಲಿ ಆ ರೀತಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ-3 ದಾಖಲೆ ಆಗುವ ಸಮಯಕ್ಕೆ ಸರ್ವೆ ನಂಬರ್ 10/6 ಹ್ಯಾಮಯ್ಯ ಬಿನ್ ರಾಮಚಂದ್ರಯ್ಯ ರವರ ಹೆಸರಿನಲ್ಲಿ ಇತ್ತು. ಸರ್ವೆ ಯವರು ಸರ್ವೆಕಾರ್ಯ ಮಾಡುವ ಮೊದಲು ಅಕ್ಕ - ಪಕ್ಕದ ಜಮೀನಿನ ಮಾಲೀಕರಿಗೆ ನೋಟೀಸು ನೀಡಿರುತ್ತಾರೆ. ನಿಡಿ-24 ದಾಖಲೆಯಲ್ಲಿ ನೋಟೀಸು ನೀಡಿರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನಿಡಿ-24 ರಲ್ಲಿ ಸರ್ವೆ ಮಾಡಿದ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಡಿ-24 ದಾಖಲೆಯಲ್ಲಿ ಸರ್ವೆ ಯರು ರವರು ನಮ್ಮ ಕ್ವಾಯಿಷ್ (ಇಚ್ಚೆಯ ) ಮೇರೆಗೆ ಸ್ಥ..ಳ ತನಿಖೆ ಮಾಡಿ ನಕ್ಷೆಯನ್ನು ತಯಾರು ಮಾಡಿರುತ್ತೇನೆಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ಯವರ್ ರವರಿಗೆ ಸರ್ವೆ ಕಾರ್ಯ ಮಾಡಲು ತಹಶೀಲ್ದಾರ್ ರವರಿಂದ ಅದೇಶದ ಮೇರೆಗೆ ಎಂದು ನಮೂದು ಇಲ್ಲ ಎಂದರೆ ಸರಿ. ನಾನು ಕಾನೂನು ಬದ್ದವಾಗಿ ಅಳತೆಗೆ ಅರ್ಜಿ ಕೊಟ್ಟು ಅಳತೆ ಮಾಡಿಸದೇ ಈ ದಾವೆಗೋಸ್ಕರ ಈ ದಾವೆಯನ್ನು ಹಾಕಿದ ನಂತರ ಸರ್ವಯರ್ ರವರೊಂದಿಗೆ ಶರೀಕಾಗಿ ನಿಡಿ-24 ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಡಿ-24 ರಲ್ಲಿ ಮೊದಲು ಬೇರೆ ಹೆಸರು ಇರುವ ಜಾಗದಲ್ಲಿ ವೈಟ್‌ನರ್ ಹಚ್ಚಿ ನನ್ನ ಹೆಸರನ್ನು ಬರೆಯಲಾಗಿದೆ ಅದಕ್ಕೆ ಸರ್ವೆ ಯರ್ ರವರು ಸೀಲು ಸಹಿ ಮಾಡಿಲ್ಲ ಎಂದರೆ ಸರಿ. ಪಂಚಾಯ್ತಿ ಅಸ್ತಿಗಳಿಗೆ ಆಯಾಯ ಪಂಚಾಯ್ತಿಯ ಪಿಡಿ ಓ ಮತ್ತು ಸೆಕ್ರೇಟರಿ ಅಳತೆ ಮಾಡಬೇಕು ಸರ್ವೆ ಯರ್ ರವರು ಅಳತೆ ಮಾಡುವಂತಿಲ್ಲ ಎಂದರೆ ಸರಿ. ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿ ಇದ್ದುದ್ದರಿಂದ ನನಗೆ ಅಳತೆಗೆ ಅರ್ಜಿ ಕೊಡುವ ಹಕ್ಕು ಅಧಿಕಾರ ಇರಲ್ಲಿಲ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಅಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಹಾಕಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸ.ನಂ. 10/6 ರಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನ

ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.